ಓ.ಎಸ್.198/2017 ಡಿ.ಡಬ್ಲು-1
ಚನ್ನಪ್ಪ ತಂದೆ ಗಂಗಪ್ಪ ಮಾಗಿ

ದಿ.12-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಶ್ರೀ ಎ.ಎ.ಜಿ ವಕೀಲರಿಂದ 8 ನೇ ಪ್ರತಿವಾದಿ ಪರ :-**

ನಮ್ಮ ತಂದೆಯ ಅಣ್ಣ-ತಮ್ಮಂದಿರು ಬೇರೆಯಾಗಿ 10-15 ವರ್ಷಗಳಾಗಿರುತ್ತವೆ. ಆ ಬಗ್ಗೆ ಪಾಲು ವಿಭಾಗ ಪತ್ರವನ್ನು ಬರೆದಿರುವುದಿಲ್ಲ. ನಮ್ಮ ತಂದೆಯವರು ನಮಗೆ ಹಂಚಿದ ಆಸ್ತಿಗಳನ್ನು ನಾವು ಉಪಭೋಗ ಮಾಡುತ್ತಿದ್ದೇವೆ ಎಂದರೆ ಸರಿ. ನಮ್ಮ ತಂದೆಯ ಆಸ್ತಿಯ ಹಂಚಿಕೆಯನ್ನು ತಕರಾರು ಮಾಡಿರುತ್ತೇನೆ. ನಮ್ಮ ಅಣ್ಣ ತೀರಿಕೊಂಡಾಗ ನಮ್ಮ ಅತ್ತಿಗೆಯ ಹೆಸರಿಗೆ ವರ್ಗಾವಣೆ ಆಗುವಾಗ ತಕರಾರು ಮಾಡಿರುತ್ತೇವೆ. ಆ ಅರ್ಜಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ. ನ್ಯಾಯಾಲಯದಲ್ಲಿ ದಾವೆ ಚಾಲ್ತಿಯಲ್ಲಿರುವದರಿಂದ ಅರ್ಜಿಯನ್ನು ಪೆಂಡಿಂಗ್ ಇಟ್ಟಿದ್ದರು. ನನ್ನ ಅಣ್ಣ ದೇವಪ್ಪನ ಪಾಲಿಗೆ ಒಂದೆ ಆಸ್ತಿ ಹೋಗಿರುತ್ತದೆ. ಅದು ಬಿಟ್ಟು ಆತನಿಗೆ ಬೇರೆ ಆಸ್ತಿ ಕೊಟ್ಟಿರುವುದಿಲ್ಲ. ನನಗೆ ಸರ್ವೆ ನಂ.1 ರಲ್ಲಿ 3 ಎಕರೆ ಬಂದಿರುತ್ತದೆ. ಅದು ಬಿಟ್ಟು ಬೇರೆ ಆಸ್ತಿ ಬಂದಿರುವುದಿಲ್ಲ. ನನಗೆ ಬಂದ ಆಸ್ತಿಗ ದೇವಪ್ಪ ಮತ್ತು ದೇವಪ್ಪನ ಹೆಂಡತಿ ತಕರಾರು ಮಾಡಿರುವುದಿಲ್ಲ. ಈ ದಾವೆಯನ್ನು ನಮ್ಮ ಅಕ್ಕ-ತಂಗಿಯರು ಪಾಲು ಬೇಕು ಎಂದು ನಮ್ಮ ಅಣ್ಣ-ತಮ್ಮಂದಿರ ವಿರುದ್ಧ ಹಾಕಿರುತ್ತಾರೆ. ನಮ್ಮ ಅಕ್ಕ-ತಂಗಿಯರು ನಮ್ಮ ತಂದೆಯ ಆಸ್ತಿಯಲ್ಲಿ ಪಾಲು ಬೇಕು ಎಂದು ಬೇಡಿಕೊಂಡಿರುತ್ತಾರೆ. ಅದನ್ನು ಹೊರತು ಪಡಿಸಿ ಬೇರೆ ಏನು ಬೇಡಿಕೆ ಕೇಳಿರುವುದಿಲ್ಲ.

2. ದೇವಪ್ಪನ ಆಸ್ತಿ ಈಗ ಇಲಕಲ್ಲಿನ ಮುಸ್ಲಿಂನವರ ಹೆಸರಿನಲ್ಲಿರುತ್ತದೆ ಅವರ ಹೆಸರು ನನಗೆ ಗೊತ್ತಿಲ್ಲ. ಆ ಆಸ್ತಿ ಅವರ ಹೆಸರಿಗೆ ಯಾವಾಗ ಆಗಿದೆ ಎಂದು ನನಗೆ ಗೊತ್ತಿಲ್ಲ. ಪಹಣಿ ಬಂದ ನಂತರ ಗೊತ್ತಾಗಿರುತ್ತದೆ. ಆ ಆಸ್ತಿಯಲ್ಲಿ ಎನ್.ಎ ಲೇಔಟ್ ಮಾಡಲು ಅರ್ಜಿ ಕೊಟ್ಟಿದ್ದರು ಎಂದು ಗೊತ್ತಾಗಿರುತ್ತದೆ. 8 ನೇ ಪ್ರತಿವಾದಿ ದಾವಾ ಆಸ್ತಿ ತನ್ನ ಹೆಸರಿಗೆ ವರ್ಗಾವಣೆ ಮಾಡಿಕೊಳ್ಳಲು ಮತ್ತು ಎನ್.ಎ ಮಾಡಿಸಲು ನಾನು ಖುದ್ದಾಗಿ ತಕರಾರು ಮಾಡಿರುತ್ತೇನೆ. ತಕರಾರು ಮಾಡಿದ ಬಗ್ಗೆ ದಾಖಲೆಗಳನ್ನು ವಕೀಲರಿಗೆ ಕೊಟ್ಟಿರುತ್ತೇನೆ. ಆ ದಾಖಲೆಗಳನ್ನು ನ್ಯಾಯಾಲಯದಲ್ಲಿ ಸಲ್ಲಿಸಿದ್ದಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಆ ಆಸ್ತಿಯನ್ನು 2 ನೇ ಪ್ರತಿವಾದಿ ಮಲ್ಲಮ್ಮ ಎಷ್ಟು ಮೊತ್ತಕ್ಕೆ ಮಾರಾಟ ಮಾಡಿರುತ್ತಾಳೆ ಮತ್ತು ಆ ದಸ್ತಾವೇಜಿಗೆ ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯನ್ನು ನ್ಮ ತಂದೆ ಜೀವಂತ ಇದ್ದಾಗ ದೇವಪ್ಪನಿಗೆ ಕೊಟ್ಟಿದ್ದರು ಎಂದರೆ ಸರಿ. ದೇವಪ್ಪ ತೀರಿಕೊಂಡ ನಂತರ 2 ನೇ ಪ್ರತಿವಾದಿ ತನ್ನ ಹೆಸರಿಗೆ ವರ್ಗಾವಣೆ ಮಾಡಿಸಿಕೊಂಡಿರುತ್ತಾಳೆ ಎಂದರೆ ಸರಿ.

೨ನೇ ಪ್ರತಿವಾದಿಯೇ ಸಂಪೂರ್ಣ ಮಾಲೀಕಳಾಗಿ ಉಪಭೋಗ ಮಾಡುತ್ತಿದ್ದಳು ಎಂದರೆ ಸರಿ. ಅದಕ್ಕೆ ನಾನು ತಕರಾರು ಮಾಡಿರುವುದಿಲ್ಲ. ಆದರೆ ಹೆಣ್ಣುಮಕ್ಕಳು ಮಾಡಿರುತ್ತಾರೆ. ನಮ್ಮ ಅಕ್ಕ-ತಂಗಿಯರನ್ನು ಉದ್ದೇಶ ಪೂರ್ವಕವಾಗಿ ನ್ಯಾಯಾಲಯಕ್ಕೆ ಕರೆಯಿಸಿ ಈ ದಾವೆ ಹಾಕಿಸಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಂದೆ ಕೊಟ್ಟ ಆಸ್ತಿಯನ್ನು ಹೊರತು ಪಡಿಸಿ ಬೇರೆ ಆಸ್ತಿ ಇರಲಿಲ್ಲ ಎಂದರೆ ಸರಿ. ನಂತರ ನಾನು ಆಸ್ತಿಯನ್ನು ಖರೀದಿ ಮಾಡಿರುತ್ತೇನೆ. ಬೇರೆ ಆಸ್ತಿಗಳನ್ನು ನಮ್ಮ ತಂದೆ ಕೊಟ್ಟ ಆಸ್ತಿಯಿಂದ ಖರೀದಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಅಕ್ಕ-ತಂಗಿಯರಿಗೆ ಬಾಗ ಕೊಡಬೇಕಾಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಹೆಸರಿನಲ್ಲಿರುವ ಎಲ್ಲಾ ಆಸ್ತಿಯಲ್ಲಿ ಪಾಲು ಕೊಡಬೇಕಾಗುತ್ತದೆ ಎಂದು ಸ್ವಯಾರ್ಜಿತ ಆಸ್ತಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ೩ನೇ ಪ್ರತಿವಾದಿ ದಾಖಲೆಗಳನ್ನು ಪರಿಶೀಲಿಸಿ ಕಾನೂನು ಬದ್ದವಾಗಿ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದೇವಪ್ಪನ ಆಸ್ತಿಯಲ್ಲಿ ನಮಗೆ ಯಾವುದೇ ಸಂಬಂಧ ಇಲ್ಲದಿದ್ದರೂ ಸಹ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ..

ಲಿಂಗಸಗೂರು.